215 (391) ಶ್ರೀ ನರೇಂದ್ರ ಬಾಬು,ನೆ ಲ (ರಾಜಾಜಿನಗರ)

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗಡೆ ಉತ್ತರಿಸುವರೇ?

ಅ) ಕಬ್ಬನ್ ಪಾರ್ಕಿನಲ್ಲಿರುವ ಬಾಲಭವನ ಸೊಸೈಟಿಗೆ ಸರ್ಕಾರದ ವತಿಯಿಂದ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಹಣ ಎಷ್ಟು ? (ವರ್ಷವಾರು) ,

ಆ) ಬಾಲಭವನದವತಿಯಿಂದ ಮಕ್ಕಳಿ ಗೊಸ್ಕರ ಹಮ್ಮಿ ಕೊಳ್ಳುತ್ತಿರುವ ಕಾರ್ಯಕ್ರಮಗಳು ಯಾವುವು,

ಇ) ಕಾರ್ಯದರ್ಶಿ ಹುದ್ದೆ ಹೊರತುಪಡಿಸಿ ಇನ್ನುಳಿದ ನೌಕರರು ಸೊಸೈಟಿ ವತಿಯಿಂದ ಸಂಬಳ ಸಾರಿಗೆ ಪಡೆಯುತ್ತಿರುವುದರಿಂದ ಸೊಸೈಟಿಯು ಭರಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ)ಹಾಗಿದ್ದಲ್ಲಿ, ಈ ನೌಕರರನ್ನು ಸರಕಾರಿ ನೌಕರರನ್ನಾಗಿ ಪರಿಗಣಿಸುವ ಯೋಜನೆ ಸರ್ಕಾರದ ಮುಂದಿದೆಯೇ,

ಉ)ಈ ಭವನದ ಕಾಯಾಂಗವನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಿಕೊಳ್ಳುವ ವಿಚಾರ ಸರಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು,

ಊ) ಬಾಲ ಭವನದ ಒಳಾಂಗಣದಲ್ಲಿ ಸಸ್ಯಕಾಶಿ ನೀರಿಲ್ಲದ ಒಣಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಋ) ಹಾಗಿದ್ದಲ್ಲಿ, ಈಗಿರುವ ಒಂದು ಬೋರ್ ವೆಲ್ ನಂದ ಸಂಪೂರ್ಣವಾಗಿ ನೀರಾಯಿಸಲು ತೊಂದರೆ ಯಾಗಿದ್ದು ಮತ್ತೊಂದು ಬೋರ್ ವಲ್ ಕೊರೆಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್ ಕೆ ಕುಮಾರಸ್ವಾಮಿ

ಅ) ಬಾಲಭವನ ಸೊಸೈಟಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ,

ಆರ್ಥಿಕ ವರ್ಷ	ಯೋಜನೇತರ	ಯೋಜನೆ
2004–05	32 00ಲಕ್ಷ	20 00 ಲಕ್ಷ
2005–06	---	16 20ಲಕ್ಷ
2006–07	44 70ಲಕ್ಷ	30 00ಲಕ್ಷ

ಆ) ಮಕ್ಕಳ ಸಮಗ್ರ ಕಾರ್ಯಕ್ರಮ, ಹುಟ್ಟುಹಬ್ಬ ಆಚರಣೆ, ಮಕ್ಕಳ ಸದಸ್ಯತ್ವ, ರಂಗಮಂದಿರ ಕಾರ್ಯಕ್ರಮಗಳು ಅಲ್ಲದೇ ಬೇಸಿಗೆ ಶಿಬಿರ, ವಾರ್ಷಿಕ ಶಿಭಿರ, ಬಾಲವೇದಿಕೆ, ಸ್ಥಳೀಯ ಮಟ್ಟದ ಬಾಲಶ್ರೀ ಪ್ರಶಸ್ತಿಗಾಗಿ ಆಯ್ಕೆ ಶಿಭಿರ, ಪ್ರಾಂತೀಯಮಟ್ಟದ ಬಾಲಶ್ರೀ ಪ್ರಶಸ್ತಿಗಾಗಿ ಮಕ್ಕಳೋತ್ಸವ, ರಾಷ್ಟ್ರೀಯ ಹಬ್ಬಗಳು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ,

ಇ) ಪ್ರತಿ ವರ್ಷ ಸರ್ಕಾರದಿಂದ ಯೋಜನೇತರ ಶೀರ್ಷಿಕೆಯಡಿ ಅನುದಾನ ಬಿಡುಗಡೆ ಆಗುತ್ತಿದ್ದು, ಈ ಅನುದಾನದಲ್ಲಿ ಸಂಬಳ ಸಾರಿಗೆ ಭರಿಸಲಾಗುತ್ತಿರುವುದರಿಂದ ಸೊಸ್ಯಟಿಗೆ ಯಾವುದೇ ರೀತಿಯ ತೊಂದರೆಯಾಗುತ್ತಿರುವುದಿಲ್ಲ

ಈ) ಬಾಲಭವನ ಸೊಸೈಟಿಯಲ್ಲಿ ಕಾರ್ಯನರ್ವಹಿಸುತ್ತಿರುವ 55 ನೌಕರರನ್ನು 1991ರಲ್ಲಿ ಸೊಸೈಟಿಯು ಖಾಯಂ ನೌಕರರೆಂದು ಪರಿಗಣಿಸಲಾಗಿದೆ ಪ್ರಯುಕ್ತ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಲು ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ

ಉ) ಬಾಲ ಭವನ ಸೊಸೈಟಿಯು ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ 1960ರ ಆಡಿಯಲ್ಲಿ ನೊಂದಾಯಿತ ಸ್ವಾಯತ್ತ ಸಂಸ್ಥೆಯಾಗಿರುತ್ತದೆ

ಊ) ಕಬ್ಬನ್ ಪಾರ್ಕಿನ ಆವರಣದಲ್ಲಿ ನೀರು ಶುದ್ಧೀಕರಣ ಘಟಕದ ಮುಖಾಂತರ ಪ್ರತಿ ದಿನ ಬಾಲಭವನದ ಗಿಡ ಲಾನ್ ಮುಂತಾದವುಗಳಿಗೆ ನೀರನ್ನು ಹಾಯಿಸಲಾಗುತ್ತಿದೆ

ಋ) ಪ್ರಸ್ತುತ, ಬಾಲಭವನದಲ್ಲಿರುವ ಏಕೈಕ ಬೋರ್ ವಲ್ ನಂದ ಸಾಕಷ್ಟು ನೀರು ಪಡೆಯುತ್ತಿದ್ದು, ಅಲ್ಲದೇ ಬೆಂಗಳೂರು ಜಲ ಮಂಡಳಿಯಿಂದಲೂ ನೀರಿನ ಸೌಲಭ್ಯ ವಿರುವುದರಿಂದ ಯಾವುದೇ ನೀರಿನ ತೊಂದರೆಯಾಗಿರುವುದಿಲ್ಲ

216 (249) ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2006–07ನೇ ಸಾಲಿನಲ್ಲಿ ಬೀಳಗಿ ಮತಕ್ಷೇತ್ರದ ರೈತರಿಗೆ ನೀಡಲಾದ ಎತ್ತು ಮತ್ತು ಬಂಡಿಗಳ ಸಂಖ್ಯೆ ಎಷ್ಟು ,

ಆ) ಬಂಡಿಯನ್ನು ಖರೀಧಿಸಲು ಮಾನ ದಂಡವೇನು , ತಲಾ ಒಂದು ಬಂಡಿಗೆ ಸರ್ಕಾರದಿಂದ ನೀಡುತ್ತಿರುವ ಹಣವೆಷ್ಟು ,

ಇ) ಬಂಡಿಗಳನ್ನು ಟೆಂಡರ್ ಮೂಲಕ ಖರೀದಿಸುವುದನ್ನು ಕೈಬಿಟ್ಟು, ಆಯಾ ಪ್ರದೇಶಕ್ಕೆ ಹೊಂದುವ ಸ್ಥಳಿಯ ಬಂಡಿ ತಯಾರಿಕಾ ಬಡಿಗರ ಸಂಘದಿಂದ ಬಂಡಿ ಖರೀದಿಸಿದಲ್ಲಿ ಸ್ಥಳೀಯರ ಕೌಶಲ್ಯಕ್ಕೆ ಉತ್ತೇಜನ ನೀಡಲಾಗುವುದೇ,

ಈ) ಅತಿ ಹಿಂದುಳಿದ ಮತ್ತು ಯ ಕೆ ಪಿ ಸಂತ್ರಸ್ತ ಬೀಳಗಿ ತಾಲ್ಲೂಕಿಗೆ ವಿಶೇಷ ಸವಲತ್ತಿನ ಮೇಲೆ ಎತ್ತು ಬಂಡಿ ಒದಗಿಸುವ ಯೋಜನೆ ಸರ್ಕಾರಕ್ಕಿದೆಯೇ ?